ಅಸಲು ದಾವೆ ನಂ.46/2016

ಡಿ.ಡಬ್ಲೂಃ 7- ಉಮಾದೇವಿ ಕೋಂ ನಾಗಭೂಷಣ

ದಿನಾಂಕಃ 20/11/2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ವಾದಿ ಪರವಾಗಿ ಶ್ರೀ ಎನ್.ಎಂ. ವಕೀಲರಿಂದ**

5. ನನ್ನ ತಂದೆಯ ಹೆಸರು ನಂಜುಂಡಪ್ಪ. ದಾವಾ ಐಟಂ ನಂ.7 ರ ಒಟ್ಟು ವಿಸ್ತೀರ್ಣ ಎಷ್ಟು ಇರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಸ್ವತ್ತು ಮೂಲತಃ ನಮ್ಮ ತಾತನಾದ ಮುನಿಯಪ್ಪರವರಿಗೆ ಸೇರಿತ್ತು. ಸದರಿ ಸ್ವತ್ತು ನಮ್ಮ ತಾತನಿಂದ ನಮ್ಮ ತಂದೆಗೆ ನೊಂದಾಯಿತ ಪತ್ರದ ಮೂಲಕ ಬಂದಿರುತ್ತದೆ ಆದರೆ ಏನು ಪತ್ರ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಸ್ವತ್ತಿನ ಖಾತೆಯು ನಮ್ಮ ತಾತನಿಂದ ಎಂ. ನಂಜುಂಡಪ್ಪ ಎಂಬುವವರಿಗೆ ವರ್ಗಾವಣೆ ಆಗಿದ್ದು ಸದರಿ ಎಂ. ನಂಜುಂಡಪ್ಪ ರವರು 1 ನೇ ಪ್ರತಿವಾದಿ ಆಗಿರುತ್ತಾರೆ ಎಂದರೆ ಸರಿ. 2020 ರಲ್ಲಿ ನಮ್ಮ ತಂದೆ ನಮ್ಮ ಹೆಸರಿಗೆ ವಿಭಾಗ ಪತ್ರ ಮಾಡಿಕೊಟ್ಟಾಗ ನಾನು ದಾಖಲೆಗಳನ್ನು ಪರಿಶೀಲಿಸಿದಾಗ ದಾವಾ ಐಟಂ ನಂ.7 ಸ್ವತ್ತು 1 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲಾಗಿರುತ್ತದೆ ಎಂದು ನನಗೆ ಗೊತ್ತಾಗಿರುತ್ತದೆ. ಸದರಿ ನಾನು ಹೇಳುತ್ತಿರುವ ವಿಭಾಗ ಪತ್ರದ ಪ್ರಕಾರ ನನ್ನ ಹಿಸ್ಸೆಗೆ ಬಂದಿರುವ ಸ್ವತ್ತಿನ ಸಂಖ್ಯೆ ಸರ್ವೆ ನಂ.151/2 ವಿಸ್ತೀರ್ಣ 21 ಗುಂಟೆ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಡಿ-59 ದಾಖಲೆಯು ನಮ್ಮ ತಂದೆ ನಮಗೆ ಬರೆದುಕೊಟ್ಟ ವಿಭಾಗ ಪತ್ರ ಆಗಿರುತ್ತದೆ. ಸದರಿ ಪತ್ರದಲ್ಲಿ ಡಿ ಶೆಡ್ಯೂಲ್ ನಲ್ಲಿ ನಮೂದಿಸಿರುವ ಸ್ವತ್ತುಗಳನ್ನು ನನ್ನ ಹಿಸ್ಸೆಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಪತ್ರದ ಪ್ರಕಾರ ನನ್ನ ಹಿಸ್ಸೆಗೆ ಯಾವ ಯಾವ ಸ್ವತ್ತುಗಳು ಬಂದಿರುತ್ತವೆ ಎಂದು ನಾನು ಪರಿಶೀಲಿಸಿರುತ್ತೇನೆ. ಸದರಿ ಡಿ ಶೆಡ್ಯೂಲ್ ನಲ್ಲಿ ಐಟಂ ನಂ.5 ಸ್ವತ್ತು ಸರ್ವೆ ನಂ.151/2 ವಿಸ್ತೀರ್ಣ 21 ಗುಂಟೆ ಇರುತ್ತದೆ ಎಂದರೆ ಸರಿ.

**6.** ಈ ದಾವೆಯ ದಾವಾ ಐಟಂ ನಂ.17 ಸ್ವತ್ತು ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಯರಿಗೆ ಸೇರಿದ ಸ್ವತ್ತಾಗಿರುತ್ತದೆ ಮತ್ತು ನಮ್ಮ ಕುಟುಂಬಕ್ಕೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತು ಈಗ ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಯರ ಸ್ವಾಧೀನದಲ್ಲಿರುತ್ತದೆ ಎಂದರೆ ಸರಿ. ಅದೇ ರೀತಿ ದಾವಾ ಐಟಂ ನಂ.7 ಸ್ವತ್ತಿನ ಸ್ವಾಧೀನದಲ್ಲಿ ನಾವು ಇರುತ್ತೇವೆ ಹೊರತು ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಯರು ಇರುವುದಿಲ್ಲ ಎಂದರೆ ಸರಿ. 2003 ರಲ್ಲಿ 1 ನೇ ಪ್ರತಿವಾದಿ ಹಾಗೂ ಅವರ ಮಕ್ಕಳು ನಿಪಿ-3 ರಂತೆ ಮಾಡಿಕೊಂಡ ವಿಭಾಗ ಪತ್ರದಲ್ಲಿ ದಾವಾ ಐಟಂ ನಂ.7 ಸ್ವತ್ತು 1 ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿ ಮತ್ತು ನಮ್ಮ ತಂದೆ ಇಬ್ಬರೂ ಸ್ನೇಹಿತರು ಎಂದರೆ ಸರಿ. ನಿಪಿ-3 ವಿಭಾಗ ಪತ್ರಕ್ಕೆ ನಮ್ಮ ತಂದೆ ಸಾಕ್ಷಿದಾರನಾಗಿ ಸಹಿ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಈಗ ನನಗೆ ತೋರಿಸಿದ ನಿಪಿ-**3** ರಲ್ಲಿ **2** ನೇ ಸಾಕ್ಷಿದಾರ ಎಂದು ನಮ್ಮ ತಂದೆಯ ಸಹಿ ಇರುತ್ತದೆ ಎಂದರೆ ಸರಿ. ದಾವಾ

ಐಟಂ ನಂ.**7** ಸ್ವತ್ತಿನ ಖಾತೆ ಈಗ **1** ನೇ ಪ್ರತಿವಾದಿಯ ಹೆಸರಿನಲ್ಲಿ ಬರುತ್ತಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಖಾತೆಯನ್ನು ಪ್ರಶ್ನಿಸಿ ನಾವು ಕಂದಾಯ ನ್ಯಾಯಾಲಯಕ್ಕೆ ಯಾವುದೇ ತಕರಾರು ಸಲ್ಲಿಸಿರುವುದಿಲ್ಲ. ಅದೇ ರೀತಿ ನಾವು ನಿಪಿ-3 ವಿಭಾಗ ಪತ್ರವನ್ನು ಪ್ರಶ್ನಿಸಿ ಯಾವುದೇ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುವುದಿಲ್ಲ. 1 ನೇ ಪ್ರತಿವಾದಿ ಮತ್ತು ನಮ್ಮ ತಂದೆ ಕೇಲವ ಸ್ನೇಹಿತರು ಅಲ್ಲದೇ ಸಂಬಂಧಿಕರೂ ಸಹ ಆಗಿರುತ್ತಾರೆ ಎಂದರೆ ಸರಿ. ಹೀಗೆ ಅವರಿಬ್ಬರು ಸಂಬಂಧಿಕರು ಆಗಿದ್ದರಿಂದ ಅವರು ವಾದಿಯರಿಗೆ ಮೋಸ ಮಾಡಲು ನಮ್ಮ ಸ್ವತ್ತನ್ನು ಸೇರಿಸಿ ನಿಪಿ-3 ರಂತೆ ಸುಳ್ಳು ವಿಭಾಗ ಪತ್ರವನ್ನು ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸ್ವತ್ತನ್ನು ನಿಪಿ-3 ವಿಭಾಗ ಪತ್ರದಲ್ಲಿ ಸೇರಿಸಿರುವುದರಿಂದ ಅದು ನನ್ನ ಪ್ರಕಾರ ತಪ್ಪಾಗಿರುತ್ತದೆ ಮತ್ತು ನನ್ನ ಸ್ವತ್ತಿಗೆ ಸಂಬಂಧಿಸಿ ಅದನ್ನು ಶೂನ್ಯಗೊಳಿಸಲು ನನ್ನ ಯಾವುದೇ ತಕರಾರು ಇರುವುದಿಲ್ಲ. ದಾವಾ ಐಟಂ ನಂ.17 ಸ್ವತ್ತು ವಾದಿಯರಿಗೆ ಸೇರಿರುತ್ತದೆ ಎಂದು ಗೊತ್ತಿದ್ದರೂ ಸಹ ನಮ್ಮ ತಂದೆಯು ಸದರಿ ಸ್ವತ್ತನ್ನು ನಿಡಿ-59 ದಾಖಲೆಯಲ್ಲಿ ನನ್ನ ಹೆಸರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸ್ವತ್ತುಗಳು ಅದಲು ಬದಲು ಆಗಿರುತ್ತವೆ ಎಂದು ನಾನು ಹೇಳುತ್ತಿದ್ದು ಅದನ್ನು ಸರಿಪಡಿಸಿಕೊಳ್ಳಲು ನಾನು ಕಂದಾಯ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ ಆದರೆ ಇದೇ ನ್ಯಾಯಾಲಯದಲ್ಲಿ ಕೇಳಿಕೊಂಡಿರುತ್ತೇನೆ. ನಾನು 2 ನೇ ಪ್ರತಿವಾದಿ ಹಾಗೂ ಅವರ ಕುಟುಂಬಕ್ಕೆ ಸಹಾಯ ಮಾಡಲು ಅವರಿಗೆ ಅನುಕೂಲ ಆಗುವ ರೀತಿಯಲ್ಲಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಪ್ರತಿವಾದಿ ಸಂಖ್ಯೆ 2(ಎ) ರಿಂದ 2(ಸಿ) ರವರ ಪರವಾಗಿ ಶ್ರೀ ಪಿ.ಎನ್.ಕೆ. ವಕೀಲರಿಂದ**

7. ದಾವಾ ಐಟಂ ನಂ.17 ಸ್ವತ್ತಿನಲ್ಲಿ 2 ನೇ ಪ್ರತಿವಾದಿಯು ಕೃಷಿ ಹೊಂಡ ನಿರ್ಮಿಸಿರುತ್ತಾರೆ ಎಂದರೆ ಸರಿ. ಅದೇ ರೀತಿ ಸದರಿ ಜಮೀನಿನಲ್ಲಿ 2 ನೇ ಪ್ರತಿವಾದಿಯ ಸಮಾಧಿ ಇರುತ್ತದೆ ಎಂದರೆ ಸರಿ. 2003 ರಲ್ಲಿ ನಿಪಿ-3 ರಂತೆ ವಿಭಾಗ ಪತ್ರ ಆದ ಸಮಯದಿಂದ ಸದರಿ ಸ್ವತ್ತು 2 ನೇ ಪ್ರತಿವಾದಿ ಹಾಗೂ ಅವರ ವಾರಸುದಾರರ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿ. ನಿಪಿ-**3** ಮತ್ತು ನಿಡಿ-**59** ವಿಭಾಗ ಪತ್ರಗಳಲ್ಲಿ ಕೈ ತಪ್ಪಿನಿಂದ ನನ್ನ ಸ್ವತ್ತುಗಳು ಸೇರಿಕೊಂಡಿರುತ್ತವೆ ಎಂದರೆ ಸರಿ.

**ಪಾಟೀ ಸವಾಲು 3 ನೇ ಪ್ರತಿವಾದಿ ಪರವಾಗಿ ಶ್ರೀ ಟಿ.ಎನ್.ಸಿ. ವಕೀಲರಿಂದ**

ವಾದಿಯರ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

**<u>ಮರು ವಿಚಾರಣೆ:</u>** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
**1 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ**
ಕೆಜಿಎಫ್